ಇದು ಮತ್ತೊಂದು ಸೋಜಿಗ. ಪಂಪನಲ್ಲಿ ನೋಡಿ. 'ಪೊಸತು' ಎನ್ನುವ ಪದದ ಮೇಲೆ ಅವನಿಗೆ ಎಷ್ಟು ಪ್ರೀತಿ! 'ಬಗೆ ಪೊಸದಪ್ಪುವಂತೆ', 'ಅರಿವಂ ಪೊಸಯಿಸುವುದು', 'ನಿಚ್ಚಂ ಪೊಸತು' – ಎಷ್ಟು ಪೊಸತುಗಳು! 'ಪೊಸಯಿಸು' ಎನ್ನುವ ಕ್ರಿಯಾಪದ ಪ್ರಾಯಃ ಪಂಪನದೇ ಕೊಡುಗೆ! ಅವನು ತನ್ನ ಕಾವ್ಯದಲ್ಲಿ ಅನೇಕ 'ಪೊಸಯಿಸುವಿಕೆ'ಗಳನ್ನು ಕಾಣಿಸಿದ್ದಾನೆ. ವ್ಯಾಸಭಾರತದಲ್ಲಿ, ದೇವತೆಗಳ ನಿಯೋಗದಿಂದ ಕುಂತಿಯಲ್ಲಿ ಪಾಂಡವರು ಜನಿಸಿದರು ಎಂಬ ವಿವರ ಇದೆ. ಪಂಪನಿಗೆ, ಈ ಮೂಲದಿಂದಲೇ ಅನೇಕ ಬಗೆಯ ನಿಯೋಗಗಳು ಸಾಧ್ಯ ಎಂದು ಹೊಳೆದಿದೆ! 'ಪುರಾಣ' ಮತ್ತು 'ಚರಿತ್ರೆ'ಗಳ ನಿಯೋಗವು ಸಾಧ್ಯ ಎಂಬ ಹೊಳಹು ಕೂಡ. ಆದುದರಿಂದಲೇ ಪುರಾಣ ಪಾತ್ರವಾದ ಅರ್ಜುನನ್ನು ಕಣ್ಣೆದುರಿನ 'ಅರಿಕೇಸರಿ'ಯೊಡನೆ 'ತಗುಳ್ಚಿ' ತನ್ನ ಕಾವ್ಯವನ್ನು ಬರೆದ. ಈ 'ತಗುಳ್ಚಿ' ಎನ್ನುವುದು ಸೃಷ್ಟಿಶೀಲತೆಯಲ್ಲಿ ಮುಖ್ಯವಾದ ಕಾಣ್ಕೆ ಎಂದು ನನಗನಿಸುತ್ತದೆ. ತಗುಳ್ಚಿ ನೋಡಿದರೆ, ಪರಂಪರೆ ಮತ್ತು ಆಧುನಿಕತೆಗಳೂ ಪರಸ್ಪರ ವಿರುದ್ಧ ಎನ್ನುವುದರ ಬಿಸಿ ಸ್ವಲ್ಪ ಮಟ್ಟಿಗೆ ಆರುತ್ತದೆ!

ಕುಮಾರವ್ಯಾಸನನ್ನು ನೋಡಿ. ಮೊತ್ತ ಮೊದಲ ಭಾಮಿನಿಯಲ್ಲೇ ಬಂದಿದೆ– ನೂತನ ಕಥನ ಕಾರಣ– ಎಂಬ ನುಡಿಗಟ್ಟು! ವೈದಿಕ ಕವಿಗೆ ವೇದದ 'ನೂತನ' ಪದ ನೆನಪಾಗಿರಬೇಕು! ಹಳೆಯ ಕಥೆಯನ್ನು ತನ್ನ ಭಾಷೆಯಲ್ಲಿ ತನ್ನ ಕಾಲದ ಭಾಷೆಯಲ್ಲಿ ನುಡಿಯಹೊರಟಿದ್ದಾನೆ.

ಹೊಸ ಭಾಷೆಯಲ್ಲಿ ಹೇಳುವ ಕಥನ ತನಗೆ ತಿಳಿಯದೆಯೇ ಹೊಸ ಕಥನವಾಗಿಬಿಡುವುದು. ಅದು ಭಾಷೆಯೊಳಗಿನ ಲೀಲೆ! ದೈವಲೀಲೆಯಂತೆ!

ಹೀಗೆ ಎಷ್ಟೂ ಹೇಳಬಹುದು. ದೀರ್ಘವಾಗುತ್ತದೆ. ಎಲ್ಲವೂ ರೂಪಾಂತರಗೊಳ್ಳುತ್ತ ನಡೆದಿದೆ. ಈ ರೂಪಾಂತರವನ್ನು ಗುರುತಿಸುವ ಕಣ್ಣನ್ನು ಪಡೆಯುವುದು ಮುಖ್ಯ. ಅದೇ ಅರಿವಿನ ಕಣ್ಣು!

◆ **ಪೂರ್ವ–ಪಶ್ಚಿಮಗಳ ತಾತ್ವಿಕತೆಯನ್ನು ಈ ಹಿನ್ನೆಲೆಯಲ್ಲಿ ವಿವರಿಸಿಕೊಳ್ಳಬಹುದೆ?**

ಪಶ್ಚಿಮದಲ್ಲೂ ಅನೇಕ ಧಾರೆಗಳಿವೆ. ಎಲ್ಲವೂ

ಲಕ್ಷ್ಮೀಶ ತೋಳ್ಪಾಡಿ ಕೃಷಿಕ, ಚಿಂತಕ ಮತ್ತು ವಿದ್ವಾಂಸರು. ವೈದಿಕ ಮತ್ತು ವೈಚಾರಿಕ ನಿಲುವುಗಳನ್ನು ಪರಸ್ಪರ ಮುಖಾಮುಖಿಯಾಗಿಸಿದರು. ಇವರದು ಉತ್ತು ಬಿತ್ತುವ ವೈದಿಕ ಮನೆತನ. ಆಡುಭಾಷೆ ತುಳು. ತಾರುಣ್ಯದಲ್ಲಿ ಕೆಲ ಕಾಲ ಬೆಂಗಳೂರಿನಲ್ಲಿದ್ದರು. ವೈ.ಎನ್.ಕೆ, ಗೋಪಾಲಕೃಷ್ಣ ಅಡಿಗ, ಲಂಕೇಶ್, ಕಿ.ರಂ. ನಾಗರಾಜ ಅವರ ಒಡನಾಟದಲ್ಲಿದ್ದವರು. ಭಕ್ತಿವಿಭಕ್ತಿಗಳ ನಡುವಿನ ಆಧ್ಯಾತ್ಮಿಕ ವ್ಯಾಕರಣದ ಹುಡುಕಾಟ ತೀವ್ರಗೊಂಡು ಶಿವಮೊಗ್ಗಕ್ಕೆ ತೆರಳಿದಾಗ, ಅಲ್ಲಿ ಸತ್ಯಕಾಮರ ಒಡನಾಟ ದಕ್ಕಿತು. ಪುತ್ತೂರಿನ ಅಜ್ಜನ ಸಾಧನೆಯ ಗವಿಯೊಳಗೆ ಬೆಳಕು ಕಾಣಲು ಹಂಬಲಿಸಿದವರು. 'ಒಂದು ಗಿಡ ತನಗೆ ಬೇಕಾದ್ದನ್ನು ಮಣ್ಣಿನಿಂದ ಪಡೆದುಕೊಂಡು ಅದು ಏನು ಕೊಡಬೇಕೆಂದಿದೆಯೋ ಅದನ್ನು ಕೊಟ್ಟೇ ಕೊಡುತ್ತದೆ' ಎಂಬ ಸೂಫಿ ಬ್ಯಾರಿಯವರ ಮಾತಿಗೆ ಮರುಳಾದವರು. ಕುಮಾರಧಾರೆಗೆ ಅಣೆಕಟ್ಟು ಕಟ್ಟುವುದು ಸ್ಥಳೀಯ ರೈತರಿಗೆ ಹಾನಿಕಾರಕವೆನ್ನಿಸಿದಾಗ 'ಕಿಸಾನ್ ಸಂಘ'ದ ಮೂಲಕ ರೂಪುಗೊಂಡ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಪೌರಾಣಿಕ ಬಿಂಬಗಳನ್ನು ಸಮಕಾಲೀನ ಕನ್ನಡಿಯ ಮುಂದೆ ತಂದು ನಿಲ್ಲಿಸುತ್ತ ಮಾತಿನ ಮುತ್ತಿನಹಾರ ಪೋಣಿಸುವುದರಲ್ಲಿ ಪರಿಣತರು. ಭಾರತೀಯ ಮತ್ತು ಪಾಶ್ಚಿಮಾತ್ಯ ವಾಙ್ಮಯವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿರುವ ತೋಳ್ಪಾಡಿಯವರ ಆಲೋಚನೆ, ಚಿಂತನೆ, ಮಾತು, ಬರಹಗಳಲ್ಲಿ ಸೃಷ್ಟಿಶೀಲತೆಯ ಶೋಧವನ್ನು ಕಾಣಬಹುದು. ಸಮಾಜ, ಸಂಸ್ಕೃತಿ, ಸಾಹಿತ್ಯವನ್ನು ಭಿನ್ನ ಪಾತಳಿಯಲ್ಲಿ ಕಾಣುವ, ಕಾಣಿಸುವ ಅವರ ಕ್ರಮ ಅನನ್ಯವಾದದ್ದು. ಕವಿಹೃದಯದ ತೋಳ್ಪಾಡಿಯವರ ಮಾತಿನಲ್ಲಿಯೂ ಮೌನದಲ್ಲಿಯೂ ಕಥನಕ್ಕಿಂತ ಕಾವ್ಯವೇ ಹೆಚ್ಚು. 'ಭಾರತ ಯಾತ್ರೆ', 'ಆನಂದಲಹರಿ', 'ಬೆಟ್ಟ ಮಹಮದನ ಬಳಿಗೆ ಬಾರದಿದ್ದರೆ', 'ಸಂಪಿಗೆ ಭಾಗವತ', 'ಭಕ್ತಿಯ ನೆಪದಲ್ಲಿ', 'ಬಾಳು' ಪ್ರಮುಖ ಪುಸ್ತಕಗಳು.